# PAPER-II
# KANNADA

**Signature and Name of Invigilator**

1. (Signature) ____________________
   (Name) ____________________
2. (Signature) ____________________
   (Name) ____________________

OMR Sheet No. : ...............................................
(To be filled by the Candidate)

Roll No. | | | | | | | | |
(In figures as per admission card)

Roll No.____________________________
(In words)

**D 2 1 1 3**

Time : **1 1/4** hours]  [Maximum Marks : **100**

Number of Pages in this Booklet : **12**  Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example :** (A) (B) ● (D)
   where (C) is the correct response.
5. Your responses to the items are to be indicated in the **OMR Sheet given inside the Paper I Booklet only.** If you mark at any place other than in the circle in the OMR Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the OMR Sheet, except for the space allotted for the relevant entries, which may disclose your identity, or use abusive language or employ any other unfair means such as change of response by scratching or using white fluid, you will render yourself liable to disqualification.
9. You have to return the test question booklet and Original OMR Sheet to the invigilators at the end of the examination compulsorily and must not carry it with you outside the Examination Hall. You are, however, allowed to carry duplicate copy of OMR Sheet on conclusion of examination.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. इस पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के वृत्त को पेन से भरकर काला करना है जैसा कि नीचे दिखाया गया है ।
   **उदाहरण :** (A) (B) ● (D)
   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये OMR पत्रक पर ही** अंकित करने हैं । यदि आप OMR पत्रक पर दिये गये वृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप OMR पत्रक पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, जैसे कि अंकित किये गये उत्तर को मिटाना या सफेद स्याही से बदलना तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं मूल OMR पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें । हालांकि आप परीक्षा समाप्ति पर OMR पत्रक की डुप्लीकेट प्रति अपने साथ ले जा सकते हैं ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई नकारात्मक अंक नहीं हैं ।**

## KANNADA
## Paper – II

**ಸೂಚನೆಗಳು :** ಈ ಪತ್ರಿಕೆಯಲ್ಲಿ ಬಹುಆಯ್ಕೆಯ **ಐವತ್ತು** (50) ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು** (2) ಅಂಕಗಳು ಇರುತ್ತವೆ. ಎಲ್ಲಾ ಪ್ರಶ್ನೆಗಳನ್ನೂ ಉತ್ತರಿಸಿರಿ.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :**

**1.** ಪಂಪನ ಮಾಹಿತಿ ಒಳಗೊಂಡ ಶಾಸನ :

(A) ಶ್ರವಣಬೆಳಗೊಳ ಶಾಸನ

(B) ತಮಟಕಲ್ಲು ಶಾಸನ

(C) ಗಂಗಾಧರಂ ಶಾಸನ

(D) ಬೊಪ್ಪಣ್ಣಪಂಡಿತನ ಶಾಸನ

**2.** ಕಾವೇರಿ ನದಿಯ ಹೆಸರು ಪ್ರಸ್ತಾಪವಾಗಿರುವ ಕನ್ನಡದ ಪ್ರಾಚೀನ ಕೃತಿ :

(A) ಕವಿರಾಜಮಾರ್ಗ

(B) ಶಬ್ದಮಣಿದರ್ಪಣ

(C) ವಿಕ್ರಮಾರ್ಜುನ ವಿಜಯಂ

(D) ವಡ್ಡಾರಾಧನೆ

**3.** 'ಚೆಂದ ಬಿದಿಗೆ ಕಣ್ಣಿಲ್ಲಕ್ಕುಂ' ಎಂಬ ಉಕ್ತಿ ಇರುವ ಕಾವ್ಯ :

(A) ಅನಂತನಾಥ ಪುರಾಣ

(B) ಹರಿಶ್ಚಂದ್ರ ಚಾರಿತ್ರ

(C) ಜಗನ್ನಾಥ ವಿಜಯ

(D) ಯಶೋಧರ ಚರಿತೆ

**4.** ಗಂಗ ದೊರೆ ರಾಚಮಲ್ಲನ ಆಶ್ರಯದಲ್ಲಿದ್ದ ಕವಿ :

(A) ಒಂದನೆಯ ನಾಗವರ್ಮ

(B) ಚಾವುಂಡರಾಯ

(C) ನೇಮಿಚಂದ್ರ

(D) ಶಾಂತಿನಾಥ

**5.** 'ಪದರಚನೆ ಸಜ್ಜನ ಶ್ರವಣದೊಳ್ ಅಂಚೆಯ ತುಪ್ಪುಳ್ ಅಂಚೆಯಂ ತೀವಿದವೊಲ್' ಹೀಗೆ ಹೇಳಿದ ಕವಿ :

(A) ನಾಗಚಂದ್ರ

(B) ರನ್ನ

(C) ರುದ್ರಭಟ್ಟ

(D) ಆಂಡಯ್ಯ

**6.** ಕರ್ಣಾಟಕ ಕಾದಂಬರಿ ಕೃತಿಗೆ ಪ್ರೇರಣೆಯಾದ ಕವಿ :

(A) ಕಾಳಿದಾಸ

(B) ಭಾಸ

(C) ಬಾಣಭಟ್ಟ

(D) ಶೂದ್ರಕ

**7.** ಷಡಕ್ಷರದೇವ ಕವಿಯ ಕಾಲ :

(A) 1650

(B) 1585

(C) 1570

(D) 1604

**8.** ಯೋಗ ಭೋಗ ಸಮನ್ವಯ ನಿರೂಪಣೆ ಇರುವ ಕೃತಿ :

(A) ಕುಮಾರರಾಮನ ಸಾಂಗತ್ಯ

(B) ತೊರವೆ ರಾಮಾಯಣ

(C) ಧರ್ಮಾಮೃತ

(D) ಭರತೇಶ ವೈಭವ

9. 'ಮಾನವ ಜನ್ಮ ದೊಡ್ಡದು' ಎಂದು ಹೇಳಿದವರು :
(A) ಕನಕದಾಸರು
(B) ವಿಜಯದಾಸರು
(C) ಪುರಂದರದಾಸರು
(D) ಜಗನ್ನಾಥದಾಸರು

10. ಮುದ್ದಣನ 'ಶ್ರೀರಾಮ ಪಟ್ಟಾಭಿಷೇಕಂ' ಕೃತಿಯ ಸಾಹಿತ್ಯ ರೂಪ :
(A) ಗದ್ಯ
(B) ಪದ್ಯ
(C) ಕಾದಂಬರಿ
(D) ಯಕ್ಷಗಾನ

11. 'ದುರ್ಗಾಸ್ತಮಾನ ' ಕೃತಿಯ ಕರ್ತೃ :
(A) ಬಸವರಾಜ ಕಟ್ಟಿಮನಿ
(B) ಅ.ನ.ಕೃ.
(C) ಮಾಸ್ತಿ ವೆಂಕಟೇಶ ಅಯ್ಯಂಗಾರ್
(D) ತ.ರಾ.ಸು.

12. 'ಸರಸ್ವತಿ ಸಮ್ಮಾನ್' ಪ್ರಶಸ್ತಿ ಪಡೆದ ಕೃತಿ :
(A) ಮಂದ್ರ
(B) ಮಹಾಚೈತ್ರ
(C) ಸಂಸ್ಕಾರ
(D) ಅರಮನೆ

13. ಬುದ್ಧನ ಕೊನೆಯ ದಿನಗಳನ್ನು ಕುರಿತ ಕಾವ್ಯ :
(A) ಗೋಲ್ಗೊಥಾ
(B) ಹೃದಯರಂಗ
(C) ವೈಶಾಖಿ
(D) ಪ್ರಭಾಸ

14. ಸ್ತ್ರೀವಾದಿ ಚಿಂತನೆಯನ್ನೊಳಗೊಂಡ ಕೃತಿ :
(A) ಸೆಕೆಂಡ್ ಸೆಕ್ಸ್
(B) ಸೌಂದರ್ಯ ಸಮೀಕ್ಷೆ
(C) ಸಾಹಿತ್ಯ ಪ್ರವೇಶ
(D) ಸತ್ಯ ಮತ್ತು ಸೌಂದರ್ಯ

15. ಶ್ರೀರಂಗರ ರಾಜಕೀಯ ವಿಡಂಬನೆಯ ನಾಟಕ :
(A) ಜೈಸಿದ ನಾಯಕ
(B) ತುಘಲಕ್
(C) ಟೊಳ್ಳುಗಟ್ಟಿ
(D) ಶೋಕಚಕ್ರ

16. ಧ್ವನಿ ಸಿದ್ಧಾಂತದ ಪ್ರವರ್ತಕ :
(A) ಭಾಮಹ
(B) ಆನಂದವರ್ಧನ
(C) ವಿಶ್ವನಾಥ
(D) ವಾಮನ

17. ರೌದ್ರ ರಸದ ಸ್ಥಾಯಿಭಾವ :
(A) ಶೋಕ
(B) ಕ್ರೋಧ
(C) ರತಿ
(D) ಹಾಸ

18. 'ಮಾನಸಿಕ ದೂರ ' ತತ್ವ ಪ್ರತಿಪಾದಕ :
(A) ಎಡ್ವರ್ಡ್ ಬುಲ್ಲೊ
(B) ಎಫ್.ಆರ್. ಲೀವಿಸ್
(C) ಎಡ್ವರ್ಡ್ ಸೈಡ್
(D) ಮ್ಯಾಥ್ಯೂ ಆರ್ನಾಲ್ಡ್

19. ಪ್ರಾಚೀನ ಕನ್ನಡ ಭಾಷೆಯಲ್ಲಿ 'ಅಮ್ಮ' ಪದದ ಅರ್ಥ :
(A) ತಾಯಿಯ ತಾಯಿ
(B) ಅಪ್ಪ
(C) ತಾಯಿ
(D) ತಂದೆಯ ತಾಯಿ

20. ಕೆಳಗಿನವುಗಳಲ್ಲಿ ಯಾವುದು ಕನ್ನಡ ಪದ ?
(A) ತಾರೀಖು
(B) ಗುಲಾಬಿ
(C) ತ್ಯಾಗ
(D) ಮನೆ

**ಬಹು ಆಯ್ಕೆ ಮಾದರಿಯ ಪ್ರಶ್ನೆಗಳು :**

21. ಮಹಾಭಾರತ ವಸ್ತುವನ್ನು ಆಧರಿಸಿ ಕೃತಿ ರಚನೆ ಮಾಡಿದವರು :
i ಪಂಪ - ಕುಮಾರವ್ಯಾಸ
ii ರನ್ನ - ಚಾಟು ವಿಠಲನಾಥ
iii ಭೈರಪ್ಪ - ಕಡೆಂಗೋಡ್ಲು ಶಂಕರಭಟ್ಟ
iv ಷಡಕ್ಷರದೇವ - ತೊರವೆ ನರಹರಿ
**ಇವುಗಳಲ್ಲಿ ಸರಿಯಾದ ಉತ್ತರ**
(A) i ಮತ್ತು iv
(B) ii ಮತ್ತು i
(C) i ಮತ್ತು iii
(D) ii ಮತ್ತು iv

22. ಇವು ಷಟ್ಪದಿ ಕಾವ್ಯಗಳು :
i ವೀರೇಶ ಚರಿತೆ - ಸಿದ್ಧರಾಮ ಚಾರಿತ್ರ್ಯ
ii ಕರ್ನಾಟ ಭಾರತ ಕಥಾಮಂಜರಿ- ಮೋಹನ ತರಂಗಿಣಿ
iii ಜೈಮಿನಿ ಭಾರತ- ಗಿರಿಜಾ ಕಲ್ಯಾಣ
iv ಪ್ರಭುಲಿಂಗ ಲೀಲೆ- ರಾಮಧಾನ್ಯ ಚರಿತೆ
**ಇವುಗಳಲ್ಲಿ ಸರಿಯಾದ ಉತ್ತರ**
(A) i ಮತ್ತು ii
(B) i ಮತ್ತು iv
(C) ii ಮತ್ತು iv
(D) ii ಮತ್ತು iii

23. ಅರ್ಥಾಂತರಕ್ಕೆ ಉದಾಹರಣೆ :
i ಎಣ್ಣೆ - ಬೆಟ್ಟ
ii ಕೂಸು- ಮುತ್ತೈದೆ
iii ಅರಸ- ಅಡುಗೆ
iv ಸಮಯ- ವಿಪರೀತ
**ಇವುಗಳಲ್ಲಿ ಸರಿಯಾದ ಉತ್ತರ**
(A) i ಮತ್ತು iii
(B) i ಮತ್ತು iv
(C) ii ಮತ್ತು iv
(D) ii ಮತ್ತು iii

24. ಇವರು ಸಂಶೋಧನ ಕ್ಷೇತ್ರಕ್ಕೆ ಮೌಲಿಕ ಕೊಡುಗೆ ನೀಡಿದವರು :
i ಚಂದ್ರಶೇಖರ ಪಾಟೀಲ
ii ಎಂ. ಚಿದಾನಂದಮೂರ್ತಿ
iii ಎಂ.ಎಂ. ಕಲಬುರ್ಗಿ
iv ಎಚ್.ಎಂ. ಚೆನ್ನಯ್ಯ
**ಇವುಗಳಲ್ಲಿ ಸರಿಯಾದ ಉತ್ತರ**
(A) ii ಮತ್ತು iii
(B) i ಮತ್ತು iv
(C) ii ಮತ್ತು iv
(D) i ಮತ್ತು iii

25. ಭಾರತದ ಸ್ವಾತಂತ್ರ್ಯ ಚಳುವಳಿಯ ಹಿನ್ನೆಲೆಯಲ್ಲಿ ಬಂದಿರುವ ಕಾದಂಬರಿಗಳು :
i ವಿಮೋಚನೆ
ii ವೈಶಾಖ
iii ಮಾಡಿ ಮಡಿದವರು
iv ವಿಜಯ ಯಾತ್ರೆ
**ಇವುಗಳಲ್ಲಿ ಸರಿಯಾದ ಉತ್ತರ**
(A) i ಮತ್ತು ii
(B) ii ಮತ್ತು iii
(C) ii ಮತ್ತು iv
(D) iii ಮತ್ತು iv

**26.** ಇವು ನವ್ಯ ಕವಿತೆಗಳು :

i ಭೂಮಿ ಗೀತ

ii ದೇವರು ರುಜು ಮಾಡಿದನು

iii ತೆಂಕಣ ಗಾಳಿಯಾಟ

iv ಪಾಂಡು ಮಾದ್ರಿ

**ಇವುಗಳಲ್ಲಿ ಸರಿಯಾದ ಉತ್ತರ**

(A) i ಮತ್ತು iii

(B) i ಮತ್ತು iv

(C) ii ಮತ್ತು iv

(D) iii ಮತ್ತು iv

**27.** ಇವು ಅನುವಾದ ಕಾದಂಬರಿಗಳು :

i ಗೋರಾ- ತೋಟಿಯ ಮಗ

ii ಆನಂದ ಮಠ- ಎರಡು ಬಳ್ಳ

iii ಕಾಡು- ಕೆಂಪು ಮೀನು

iv ಗೋದಾನ- ಶಾಂತಲಾ

**ಇವುಗಳಲ್ಲಿ ಸರಿಯಾದ ಉತ್ತರ**

(A) i ಮತ್ತು iii

(B) ii ಮತ್ತು iv

(C) i ಮತ್ತು ii

(D) iii ಮತ್ತು iv

**28.** ಇವು ದಂತ್ಯ ವರ್ಣಗಳು :

i ಕ ಮತ್ತು ಗ

ii ಚ ಮತ್ತು ಜ

iii ತ ಮತ್ತು ದ

iv ಧ ಮತ್ತು ನ

**ಇವುಗಳಲ್ಲಿ ಸರಿಯಾದ ಉತ್ತರ**

(A) iii ಮತ್ತು iv

(B) i ಮತ್ತು iii

(C) ii ಮತ್ತು iv

(D) i ಮತ್ತು ii

**29.** ಇವು ಸಾಹಿತ್ಯ ವಿಮರ್ಶೆಯ ಕೃತಿಗಳು :

i ತಪೋನಂದನ- ಭುವನದ ಭಾಗ್ಯ

ii ಬಂಡಾಯ- ನಿಜ ದನಿ

iii ಅಮೃತ ಮತ್ತು ಗರುಡ- ಯುಗಧರ್ಮ ಮತ್ತು ಸಾಹಿತ್ಯ ದರ್ಶನ

iv ಸ್ವರೂಪ- ವಿಕ್ಷೇಪ

**ಇವುಗಳಲ್ಲಿ ಸರಿಯಾದ ಉತ್ತರ**

(A) i ಮತ್ತು ii

(B) i ಮತ್ತು iii

(C) ii ಮತ್ತು iv

(D) iii ಮತ್ತು iv

**30.** ಇವು ಭೈರಪ್ಪ ಎಸ್. ಎಲ್. ಅವರ ಕಾದಂಬರಿಗಳು :

i ಬಿರುಕು- ಅಳಿದ ಮೇಲೆ

ii ನಾಯಿನೆರಳು- ಗತಿಸ್ಥಿತಿ

iii ಗೃಹಭಂಗ- ವಂಶವೃಕ್ಷ

iv ದಾಟು- ಸಾಕ್ಷಿ

**ಇವುಗಳಲ್ಲಿ ಸರಿಯಾದ ಉತ್ತರ**

(A) i ಮತ್ತು iii

(B) ii ಮತ್ತು iv

(C) i ಮತ್ತು ii

(D) iii ಮತ್ತು iv

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ-**

ಈ ಕೆಳಗಿನ ಲೇಖನ ಭಾಗವನ್ನು ಓದಿಕೊಂಡು ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳಗಳಲ್ಲಿ ಗುರುತಿಸಿ. (31 **ನೇ ಪ್ರಶ್ನೆಯಿಂದ** 35 **ನೇ ಪ್ರಶ್ನೆಯವರೆಗೆ)**

ಭಾರತದ ವಿವಿಧ ಪ್ರಾಂತಗಳಲ್ಲಿ ವಿವಿಧ ಸ್ವರೂಪದ ವಿದ್ಯಾರ್ಥಿ ಚಳುವಳಿಗಳ ಭೀಷಣ ರೂಪವನ್ನು ಕಾಣತೊಡಗಿದ್ದೇವೆ. ಅದರಲ್ಲಿಯೂ, ಸೆಕೆಂಡರಿ ವಿದ್ಯಾಭ್ಯಾಸವನ್ನು ಮುಗಿಸಿ ವಿಶ್ವವಿದ್ಯಾಲಯಗಳಿಗೆ ಕಾಲಿಡುವ ತರುಣರಲ್ಲಿ ಈ ಪ್ರವೃತ್ತಿಯನ್ನು ವಿಶೇಷವಾಗಿ ಕಾಣುತ್ತಿದ್ದೇವೆ. ಇಂಥ ಚಳುವಳಿಗಳಿಗೆ ಕಾರಣವೇನು- ಎಂಬುದನ್ನು ಈಗಷ್ಟೆ ನಾವು ಯೋಚಿಸತೊಡಗಿದ್ದೇವೆ. ವಿದ್ಯಾರ್ಥಿಗಳು ಸಣ್ಣ ವಿಷಯಕ್ಕಾಗಲಿ, ದೊಡ್ಡ ವಿಷಯಕ್ಕಾಗಲಿ, ತಮ್ಮ ಜೀವನಕ್ಕೆ ಸಂಬಂಧಪಟ್ಟ ವಿಷಯಕ್ಕಾಗಲಿ, ಅದಕ್ಕಿಂತ ದೂರದ ವಿಷಯಗಳಿಗಾಗಲಿ ಸಾಮೂದಾಯಿಕ ಚಳವಳಗಳನ್ನು ಹೂಡುತ್ತಿದ್ದಾರೆ. ಸಭೆ, ಮೆರವಣಿಗೆ, ಸತ್ಯಾಗ್ರಹ, ವಿಧ್ವಂಸಕ ಕೃತ್ಯ, ಎಲ್ಲ ರೂಪಗಳೂ ಇಂಥ ಚಳವಳಗಳಿಗೆ ಬರುತ್ತಿರುವುದನ್ನು ಕಾಣುತ್ತಿದ್ದೇವೆ. ಇಂಥ ಕ್ರಾಂತಿಕಾರಿ ಇಲ್ಲವೆ ವಿಧ್ವಂಸಕ ವರ್ತನೆಗಳಿಗೆ ಒಂದೇ ಕಾರಣವನ್ನೋ, ನಾಲ್ಕಾರು ಕಾರಣಗಳನ್ನೋ ನಾವು ಹುಡುಕಿಯೂ ತೋರಿಸುವಂತಿಲ್ಲ. ಇಂಥ ಚಳವಳಗಳು ಯಾವುದೇ ಬಗೆಯ ಅತೃಪ್ತಿಯ ಪರಿಣಾಮವೆಂಬುದಾಗಿ ನಾವು ಊಹಿಸುವಲ್ಲಿ, ಅವು ಕೇವಲ ವಿದ್ಯಾರ್ಥಿಗಳಿಗೆ ಅಂಟಿದ ಅತೃಪ್ತಿ-ಗಳಿರುವುದಾದರೆ, ಅವು ಕೇವಲ ವಿದ್ಯಾರ್ಥಿ ಜೀವನಕ್ಕೆ ಸಂಬಂದಿಸಿದ್ದಿರಬೇಕು. ಅಂಥವುಗಳ ಹಿನ್ನೆಲೆ, ಕೇವಲ ಒಂದೆರೆಡು ವರ್ಷಗಳಿಂದೀಚೆಗೆ ಬೆಳೆದು ಬಂದುದೂ ಇರಲಾರದು. ಸ್ವಾತಂತ್ರ್ಯ ಪೂರ್ವದಲ್ಲಿ ಕಾಣದಿದ್ದ ಭೀಕರ ರೂಪ ಅನಂತರ ಒಮ್ಮೆಗೇ ಮೊಳೆತು, ಬೃಹದಾಕಾರ ತಾಳುತ್ತಿದೆಯೇನು ? ಇದಕ್ಕೆ ಪೋಷಕವಾಗಿ ಏನೇನು ಒಳ ಮತ್ತು ಹೊರ ಕಾರಣಗಳು ಸಾರವನ್ನೊದಗಿಸುತ್ತಿವೆ ? ಹಿಂದೆ ಕಾಣಿಸದ ಯಾವ ಆವರಣ ಹೊಸತಾಗಿ ಈಗ ಕಾಣಿಸತೊಡಗಿದೆ- ಎಂಬುದನ್ನು ನಾವು ವಿಚಾರಿಸಬೇಕು. ಇಂಥ ಚಳವಳಗಳು ವಿಧ್ವಂಸಕ ರೂಪ ತಾಳಿದ ಮೇಲೆ- ವಿದ್ಯಾಸಂಸ್ಥೆಗಳ ಅಧಿಕಾರಿಗಳ ಹತೋಟಿ ಉಳಿಯುವುದಿಲ್ಲ. ಅಧ್ಯಾಪಕ ವರ್ಗವೂ ಅವರ ಕೋಪಕ್ಕೆ ತುತ್ತಾಗಬಹುದು. ವಿದ್ಯಾರ್ಥಿಗಳ ಮೆರವಣಿಗೆ ಬೀದಿಗಿಳಿದ ಮೇಲೆ, ಅದನ್ನು ನೋಡಲು ಬಂದ ಜನರೂ ಸೇರಬಹುದು. ಅವರ ಅಶಾಂತಿಗೆ ತುಪ್ಪವನ್ನೆರೆಯುವವರು, ಗಲಭೆಯಿಂದ ಲಾಭ ಸಂಪಾದನೆ ಮಾಡುವವರು, ಸಮಾಜದ ಹಲವು ವಿಧದ ಹೊಣೆಗೇಡಿಗಳು ಅವರನ್ನು ಕೂಡಿಕೊಂಡೇ ಕೂಡಿಕೊಳ್ಳುತ್ತಾರೆ. ಊರಿನ ಪೋಲೀಸ್ ಪಡೆ ಸಾವಿರಾರು ಜನರ ಮುಂದೆ ಕೈಕಟ್ಟಿ ಕುಳಿತಿರುವುದಕ್ಕೂ ಬರುವುದಿಲ್ಲ. ಬದಲು, ನಡುವೆ ಕೈಹಾಕಿದರೆ ಏನಾಗುತ್ತದೆಂಬ ಯೋಚನೆ ಅವರ ಅಧಿಕಾರಿಗಳಿಗೂ ಇರುವುದಿಲ್ಲ. ಪೋಲೀಸರ ಮಟ್ಟಿಗೆ ಹೇಳುವುದಾದರೆ- ಬ್ರಿಟಿಷರು ಆಳುತ್ತಿದ್ದ ಕಾಲದಲ್ಲಿ ಅವರಿಗೆ ಸಾರ್ವಜನಿಕ ಅಶಾಂತಿಯನ್ನು ಅಣಗಿಸುವುದಕ್ಕೆ ಕಲಿಸಿಕೊಟ್ಟ

ಪಾಠಗಳೆಲ್ಲವೂ ಇವೆ. ಲಾಥಿ, ಅಶ್ರುವಾಯು, ಕೋವಿಗಳಿವೆ. ಒಬ್ಬ ಕಿಡಿಗೇಡಿ ಒಂದು ಕಲ್ಲನ್ನೆಸೆದರೆ ಶಾಂತಿಭಂಗಕ್ಕೆ ಪ್ರಾರಂಭ. ಮುಂದೆ, ಉಭಯತರಲ್ಲಿ ಬೀದಿಯ ಯುದ್ಧವೇ ಪ್ರಾರಂಭವಾಗುತ್ತದೆ. ಶಾಂತಿ ಸೂತ್ರಗಳನ್ನು ಮೀರಿದವರಾರು ಎಂದು ಕಂಡು ಹಿಡಿಯುವುದಕ್ಕೆ, ಉಭಯ ಪಕ್ಷಗಳಲ್ಲಿ ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆಯೊಂದೇ ಸಹಾಯ ಮಾಡಬೇಕು. ಮುಂದೆ, ಸಾಕ್ಷಿಗಳನ್ನು ಮರೆ ಮಾಚುವುದಕ್ಕೆ ಬೇಕಷ್ಟು ಕಾಲವಿದೆ ; ರಾಜಕೀಯ ಪ್ರಭಾವಶಾಲಿಗಳಿದ್ದಾರೆ. ಆಳುವ ಪಕ್ಷಕ್ಕೆ ಅಪ್ರಿಯವಾದ ಘಟನೆ ನಡೆದಾಗ ಮಾತ್ರವೇ ಯಾರಾದರೂ, ಪೋಲೀಸರ ವರ್ತನೆಯನ್ನು ಖಂಡಿಸಬಹುದು. ಅದರಿಂದ ಸತ್ಯ ಹೊರಗೆ ಬರುತ್ತದೆ, ಎಂಬ ಭ್ರಮೆಯನ್ನು ನಾವು ಇರಿಸಿಕೊಳ್ಳಬೇಕಾಗಿಲ್ಲ. ಎರಡೂ ಕಡೆಯವರು ಸಾಕಷ್ಟು ಅಪರಾಧ ಮಾಡಿರುವಾಗ ವಿಚಾರಣಾ ಸಮಿತಿಗಳಿಂದ ಉಭಯತರಿಗೂ ಪ್ರಿಯವಾದ ತೀರ್ಮಾನ ಸಿಗಲಾರದಷ್ಟೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಹಿರಿಯರುಗಳು ಎಲ್ಲ ಬಗೆಯ ವಿದ್ಯಾರ್ಥಿ ಚಳವಳಗಳಿಗೂ ಒಂದೇ ಬಗೆಯ ಕಾರಣವಿದೆ. ಅದನ್ನು ತಾವು ಸುಲಭದಲ್ಲಿ ಕಂಡು ಹಿಡಿಯಬಹುದು ಎಂಬ ಭ್ರಮೆಯನ್ನಿರಿಸಿಕೊಂಡೂ ಪ್ರಯೋಜನವಿಲ್ಲ.

ಮೂಲದಲ್ಲಿ- ವಿದ್ಯಾರ್ಥಿಗಳ ಶಿಕ್ಷಣಕ್ಷೇತ್ರದ ಆವರಣವನ್ನು ಕುರಿತು ನಾವು ಚಿಂತನೆ ಮಾಡುವುದು ಲೇಸು. ತಾವು ಕಷ್ಟಪಟ್ಟು ಕಲಿತು ಕಾಲೇಜಿಂದ ಹೊರಬಿದ್ದರೆ, ಮುಂದಿನ ಜೀವನಕ್ಕೊಂದು ದಾರಿಯಾದೀತು- ಎಂಬ ಉದ್ದೇಶವಾಗಲೀ, ಆಸಕ್ತಿಯಾಗಲೀ, ಇಂದಿನ ವಿದ್ಯಾರ್ಥಿಗಳಲ್ಲಿದೆಯೇ- ಎಂಬುದು ಪ್ರಥಮ ಪ್ರಶ್ನೆ. ಅವನ ಮಟ್ಟಿಗೆ ಇಂದು ಯಾವ ಬಡತನದ ಪ್ರಶ್ನೆಯೂ ಬಾಧಿಸುತ್ತಿರುವಂತೆ ಕಾಣಿಸುತ್ತಿಲ್ಲ. ವಿದ್ಯಾಸಂಸ್ಥೆಗಳ ಸಂಖ್ಯೆ ಸಾಕಷ್ಟು ಹೆಚ್ಚಿದೆ. ಹೈಸ್ಕೂಲು ವಿದ್ಯಾಭ್ಯಾಸ ಹೆಚ್ಚು, ಕಡಿಮೆ ಮುಫತ್ತಾಗಿಯೇ ದೊರೆಯುತ್ತಿದೆ. ಅವುಗಳಲ್ಲಿ ವಿದ್ಯಾಭ್ಯಾಸ ಮುಗಿಸಿದವರು, ಮರಳಿ ತಮ್ಮ ಹಿರಿಯರ ವೃತ್ತಿಗೆ ಹೋಗುವುದು ಕಾಣಿಸುವುದಿಲ್ಲ. ಅವರೆಲ್ಲ ಬಹುವಾಗಿ ಕಾಲೇಜನ್ನು ನುಗ್ಗಿಯೇ ನುಗ್ಗುತ್ತಾರೆ. ವಿದ್ಯೆಗೆ ಪ್ರೋತ್ಸಾಹ ಕೊಡುವ ಭರದಲ್ಲಿ ನಾವು ಕಾಲೇಜುಗಳ ಪ್ರವೇಶಕ್ಕೆ ಬುದ್ಧಿಶಕ್ತಿಯನ್ನು ಅಳೆಯುವ ಹೊಸ ರೀತಿಯಲ್ಲೇ ಆಗಲಿ, ಹಳೆಯ ರೀತಿಯಲ್ಲೇ ಆಗಲಿ ಎಷ್ಟು ಕಡಿಮೆ ಮಟ್ಟವನ್ನಿರಿಸಿ ಕೊಳ್ಳಬಹುದೋ, ಅದನ್ನಿರಿಸಿಕೊಂಡಿದ್ದೇವೆ. ಬೌದ್ಧಿಕ ಶಿಕ್ಷಣಕ್ಕೆ ಇರುವ ಪ್ರವೇಶದ ಮಿತಿ ಕೀಳು ತೆರನದ್ದಾದರೆ, ಶಿಕ್ಷಣದ ಮೇಲೆ ಯಾವ ಗೌರವ ಅಥವಾ ಭಯ ಅವರಿಗೆ ಉಳಿದೀತು ?

ಅಶಾಂತಿಗೆ, ಇವತ್ತಿನ ಬೆಲೆಯೇರಿಕೆ ಮೊದಲಾದ ಕಾರಣಗಳನ್ನು ನೆಪವಾಗಿ ಹೇಳುವವರಿದ್ದಾರೆ. ವಿದ್ಯಾ ಶುಲ್ಕಕ್ಕಾಗಿ ಸತ್ಯಾಗ್ರಹಗಳು ಆಗಿವೆ ನಿಜ ; ಆದರೆ, ವಿದ್ಯಾರ್ಥಿಗಳು ಸಲ್ಲಿಸಿದ ಶುಲ್ಕದಲ್ಲಿ ಶೇಕಡಾ 80 ರಷ್ಟು ಹಣ ಮರಳಿ ಅವರಿಗೇನೇ ಸಿಗುತ್ತಿರುವ ಈ ಕಾಲದಲ್ಲಿ, ಇದೊಂದು ಕುಂಟು ನೆಪವೇ ಸರಿ. 'ಪುಸ್ತಕಗಳ ಬೆಲೆ ಹೆಚ್ಚು' ಎನ್ನುತ್ತಾರೆ. ಇಂದು ಯಾವುದರ ಬೆಲೆ ಕಡಿಮೆ ? ಆಧುನಿಕ ವಿದ್ಯಾರ್ಥಿಗಳ

ಉಡಿಗೆ, ತೊಡಿಗೆ ನೋಡಿದರೆ ಬಡತನದ ನೋವು ಅವರಿಗೆ ಒಂದಿಷ್ಟೂ ಇದ್ದುದನ್ನು ಕಾಣುತ್ತೀರಾ ? ಬುದ್ಧಿಶಕ್ತಿಯ ದೃಷ್ಟಿಯಿಂದ, ಕಾಲೇಜು ಪ್ರವೇಶವೆಂಬುದು ಅಗ್ಗವಾಗಿ ಬಂದುದರಿಂದಲೇ ನುಗ್ಗುವವರ ಸಂಖ್ಯೆ ಹೆಚ್ಚುತ್ತಿದೆ. ಸಂಖ್ಯೆಗೆ ಸಮನಾಗಿ, ಬೌದ್ಧಿಕ ಆಸಕ್ತಿ, ಕುತೂಹಲ ಬೆಳೆದುದಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಬೆಳೆದಂತೆ, ಪ್ರಾಧ್ಯಾಪಕರ ಸಂಖ್ಯೆಯೂ ಬೆಳೆಯಬೇಕು ; ಬೆಳೆಯುತ್ತಿದೆ. ಅವರ ಯೋಗ್ಯತೆ ಮಾತ್ರ ಬೆಳೆಯುತ್ತಲಿಲ್ಲ. ಶಿಕ್ಷಣದ ವಿಚಾರದಲ್ಲಿ ವಿದ್ಯಾರ್ಥಿಗಳ ಮನಸ್ಸನ್ನು ಸೆಳೆಯಬಲ್ಲ ಪ್ರಾಧ್ಯಾಪಕರ ಸಂಖ್ಯೆ ಕಡಿಮೆಯಾಗುತ್ತಿದೆ. ಅತ್ತ ಆಸಕ್ತಿ, ಕುತೂಹಲ ಸಾಲದ ವಿದ್ಯಾರ್ಥಿಗಳ ಸಂಖ್ಯೆ ; ಇತ್ತ ಯೋಗ್ಯತೆ ಕಡಿಮೆಯಾದ ಶಿಕ್ಷಕರ ಸಂಖ್ಯೆ, ಸಾಲದುದಕ್ಕೆ, ಒಂದೊಂದು ತರಗತಿಯಲ್ಲಿಯೂ ಐವತ್ತು, ನೂರು ವಿದ್ಯಾರ್ಥಿಗಳ ಸಂಖ್ಯೆ. ಇಂಥ ಆವರಣವು ತಾವು 'ಕಲಿಯಲು ಬಂದಿದ್ದೇವೆ' - ಎಂಬ ಭಾವನೆಯನ್ನೇ ಕೊಲ್ಲುವುದಕ್ಕೆ ಬೇಕಷ್ಟು ಪ್ರಚೋದನೆ ಕೊಡುವಂಥದು. ತನ್ನ ಶಿಕ್ಷಣದಿಂದ ವಿದ್ಯಾರ್ಥಿಗಳನ್ನು ಆಕರ್ಷಿಸಲಾರದ ಪ್ರಾಧ್ಯಾಪಕ ಎಂದಿಗೂ ಶಿಸ್ತನ್ನು ಕಾಪಾಡಲಾರ. ಎಲ್ಲರೂ ಕಾಲೇಜಿಗೆ ನುಗ್ಗುತ್ತಾರೆ. ತಾನೂ ನುಗ್ಗುತ್ತೇನೆ- ಎಂದು ಬಂದಿರುವ ನವ ವಿದ್ಯಾರ್ಥಿಗೆ ಶಿಕ್ಷಣದಲ್ಲಿ ಆಸಕ್ತಿ ಬರುವುದೂ ಅಸಾಧ್ಯ. ಅಲ್ಲಿಂದ ಅವರ ಮನಸ್ಸು ಬೇಕಾದ, ಬೇಡವಾದ, ಸಾವಿರ ವಿಷಯಗಳ ಕಡೆಗೆ ಹರಿದೇ ಹರಿಯುತ್ತದೆ.

**31.** ಈ ಲೇಖನ ಭಾಗದ ಪ್ರಧಾನ ಆಶಯ :

(A) ಸಾಮಾಜಿಕ ಸ್ಥಿತಿಗತಿ

(B) ವಿದ್ಯಾರ್ಥಿ ಚಳುವಳಿ

(C) ವಿದ್ಯಾರ್ಥಿಗಳ ಅಶಿಸ್ತು

(D) ಶೈಕ್ಷಣಿಕ ಗುಣಮಟ್ಟ

**32.** ಶೈಕ್ಷಣಿಕ ಸಂಸ್ಥೆಗಳ ಆವರಣದಲ್ಲಿ ವಿಧ್ವಂಸಕ ಕೃತ್ಯಗಳಿಗೆ ಕಾರಣ :

(A) ಶೈಕ್ಷಣಿಕ ವಲಯದ ನ್ಯೂನತೆಗಳು

(B) ಅಧ್ಯಾಪಕರ ಕೊರತೆ

(C) ಶಿಕ್ಷಣ ಸಂಸ್ಥೆಯ ಧೋರಣೆಗಳು

(D) ಡೊನೇಷನ್ ಹಾವಳಿ

**33.** ವಿದ್ಯಾರ್ಥಿಗಳ ಗೊಂದಲಗಳಿಗೆ ಕಾರಣ :

(A) ಶಿಕ್ಷಣದ ಉದ್ದೇಶ ಅರಿಯದಿರುವುದು

(B) ಪುಸ್ತಕಗಳ ಬೆಲೆ ಹೆಚ್ಚಾಗಿರುವುದು

(C) ಆರ್ಥಿಕ ಪರಿಸ್ಥಿತಿ

(D) ರಾಜಕಾರಣದ ನಂಟು

**34.** ವಿದ್ಯಾರ್ಥಿಗಳನ್ನು ಸರಿದಾರಿಗೆ ತರುವ ಬಗೆ :

(A) ಬೆಲೆ ಬಾಳುವ ಉಡುಗೆ ತೊಡುಗೆ ನೀಡುವುದು

(B) ಉಚಿತ ಶಿಕ್ಷಣ

(C) ಕಟ್ಟುನಿಟ್ಟಾದ ಶಿಸ್ತು ಪಾಲನೆ

(D) ವಿದ್ಯಾರ್ಥಿ ಮನಸ್ಸನ್ನು ಸೆಳೆಯಬಲ್ಲ ಬೋಧಕರು

35. ಶೈಕ್ಷಣಿಕ ಆವರಣದಲ್ಲಿ ಅಶಾಂತಿಯನ್ನು ಕೊನೆಗೊಳಿಸುವ ಮಾರ್ಗ :

(A) ಆವರಣದಲ್ಲಿ ಪೋಲೀಸರ ಬಳಕೆ

(B) ಸಾರ್ವಜನಿಕ ಸಮಿತಿ ನೇಮಕ

(C) ಆವರಣದ ಚಳುವಳಿ ಬೀದಿಗೆ ಬರದಿರುವುದು

(D) ಅಧಿಕಾರದ ಮೂಲಕ ನಿಯಂತ್ರಣ

36. **ಹೇಳಿಕೆ - ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ :**

**ಹೇಳಿಕೆ** : 'ಬವರವಾದರೆ ಹರನ ವದನಕೆ ಬೆವರ ತಹೆನು'.

**ವಿವರಣೆ** : ಯುದ್ಧವಾದರೆ ಶಿವನ ಮುಖದಿಂದ ಬೆವರು ಸುರಿಯುವಂತೆ ಮಾಡುವೆನು.

(A) ಹೇಳಿಕೆ ತಪ್ಪು, ವಿವರಣೆ ಸರಿ.

(B) ಹೇಳಿಕೆ ತಪ್ಪು, ವಿವರಣೆ ತಪ್ಪು.

(C) ಹೇಳಿಕೆ ಸರಿ, ವಿವರಣೆ ಸರಿ.

(D) ಹೇಳಿಕೆ ಸರಿ, ವಿವರಣೆ ತಪ್ಪು.

37. **ಹೇಳಿಕೆ** : 'ಕಾವ್ಯಾಭಿವ್ಯಕ್ತಿಯು ಬೌದ್ಧಿಕವಾಗಿ ಕಲಿತ ಪಂಡಿತ ಭಾಷೆಯಲ್ಲಿರುತ್ತದೆ '.

**ವಿವರಣೆ** : ಕಾವ್ಯದ ಅಭಿವ್ಯಕ್ತಿಯು ಜನರ ನಾಲಿಗೆಯ ಮೇಲೆ ನಲಿಯುವ ಭಾಷೆಯಲ್ಲಿರುತ್ತದೆ.

(A) ಹೇಳಿಕೆ ಸರಿ, ವಿವರಣೆ ತಪ್ಪು.

(B) ಹೇಳಿಕೆ ತಪ್ಪು, ವಿವರಣೆ ಸರಿ.

(C) ಹೇಳಿಕೆ ತಪ್ಪು, ವಿವರಣೆ ತಪ್ಪು.

(D) ಹೇಳಿಕೆ ಸರಿ, ವಿವರಣೆ ಸರಿ.

38. **ಹೇಳಿಕೆ** : 'ಬೆದಕದಿರು, ಬೆದಕಿದರೆ ಹುರುಳಿಲ್ಲ'.

**ವಿವರಣೆ** : ಕೆದಕಿ ಹುಡುಕದೆ ಇರು, ಹುಡುಕಿದರೆ ಹುರುಳಿ ಸಿಗಲಾರದು.

(A) ಹೇಳಿಕೆ ಸರಿ, ವಿವರಣೆ ತಪ್ಪು.

(B) ಹೇಳಿಕೆ ಸರಿ, ವಿವರಣೆ ಸರಿ.

(C) ಹೇಳಿಕೆ ತಪ್ಪು, ವಿವರಣೆ ತಪ್ಪು.

(D) ಹೇಳಿಕೆ ತಪ್ಪು, ವಿವರಣೆ ಸರಿ.

39. **ಹೇಳಿಕೆ** : 'ಇನ್ನು ಯಾಕ ಬರಲಿಲ್ಲಾವ ಹುಬ್ಬಳ್ಳಿಯಾವ, ತಿಂಗಳಾದಾಗ ಏಳು ಸರ್ತಿ ಬಂದು ಹೋಗಾವ '.

**ವಿವರಣೆ** : ತಿಂಗಳಿಗೆ ಏಳು ಸರ್ತಿ ಬಂದು ಹೋಗುವ ಹುಬ್ಬಳ್ಳಿಯಾಕೆ ಇನ್ನು ಯಾಕೆ ಬರಲಿಲ್ಲ.

(A) ಹೇಳಿಕೆ ಸರಿ, ವಿವರಣೆ ಸರಿ.

(B) ಹೇಳಿಕೆ ತಪ್ಪು, ವಿವರಣೆ ಸರಿ.

(C) ಹೇಳಿಕೆ ಸರಿ, ವಿವರಣೆ ತಪ್ಪು.

(D) ಹೇಳಿಕೆ ತಪ್ಪು, ವಿವರಣೆ ತಪ್ಪು.

40. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

| | | |
|---|---|---|
| (A) | ದುರ್ಗಸಿಂಹ | ಪಂಚತಂತ್ರ |
| (B) | ರಾಘವಾಂಕ | ಗಿರಿಜಾ ಕಲ್ಯಾಣ |
| (C) | ಭೀಮಕವಿ | ಬಸವರಾಜ ದೇವರ ರಗಳೆ |
| (D) | ಆಂಡಯ್ಯ | ಛಂದೋಂಬುಧಿ |

41. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

| | | |
|---|---|---|
| (A) | ಜೀಶಂಪ | ತ್ರಿಪದಿ ಸಂಗ್ರಹ |
| (B) | ಗದ್ದಗಿಮಠ | ಹೊನ್ನಾರು |
| (C) | ಶಿವರಾಮ ಕಾರಂತ | ಯಕ್ಷಗಾನ ಬಯಲಾಟ |
| (D) | ಹೆಚ್.ಜೆ. ಲಕ್ಕಪ್ಪಗೌಡ | ತುಳು ಗಾದೆಗಳು |

42. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದುವುದಿಲ್ಲ ?

| | | |
|---|---|---|
| (A) | ಕೆ. ಮರುಳ ಸಿದ್ಧಪ್ಪ | ಶತಮಾನದ ನಾಟಕ |
| (B) | ದೇವನೂರ ಮಹಾದೇವ | ಒಡಲಾಳ |
| (C) | ಬೆಸಗರಹಳ್ಳಿ ರಾಮಣ್ಣ | ಕನ್ನಂಬಾಡಿ |
| (D) | ಕೆ.ಎಸ್. ನಿಸಾರ್ ಅಹಮದ್ | ಗೋಕುಲ ನಿರ್ಗಮನ |

43. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

| | | |
|---|---|---|
| (A) | ಷೆಲ್ಲಿ | ವ್ಯಕ್ತಿ ನಿರಸನ ಸಿದ್ಧಾಂತ |
| (B) | ಜಾರ್ಜ್ ಲುಕಾಕ್ಸ್ | ಚಾರಿತ್ರಿಕ ವಿಮರ್ಶೆ |
| (C) | ಅರಿಸ್ಟಾಟಲ್ | ಪೊಯೆಟಿಕ್ಸ್ |
| (D) | ಐ.ಎ. ರಿಚರ್ಡ್ಸ್ | ಇಂಡಿವಿಜಿಯಲ್ ಟ್ಯಾಲೆಂಟ್ |

44. ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

| | | |
|---|---|---|
| (A) | ಸಾರಾ ಅಬೂಬಕರ್ | ಚಪ್ಪಲಿಗಳು |
| (B) | ಬಿ.ಟಿ.ಲಲಿತಾ ನಾಯಕ್ | ಕ್ರಾಂಚ ಪಕ್ಷಿಗಳು |
| (C) | ಕೊಡಗಿನ ಗೌರಮ್ಮ | ಮುಳ್ಳುಗಳು |
| (D) | ಶೈಲಜ ಉಡಚಣ | ಕಂಬನಿ |

45. ಬಹು ಆಯ್ಕೆಯ ಜೋಡಣೆ :

| | |
|---|---|
| a. ಎಂ.ಆರ್. ಶ್ರೀನಿವಾಸ ಮೂರ್ತಿ | i. ಸಾಂಪ್ರತ |
| b. ಚದುರಂಗ | ii. ರಂಗಣ್ಣನ ಕನಸಿನ ದಿನಗಳು |
| c. ಎಂ.ಎಂ. ಕಲಬುರ್ಗಿ | iii. ಶಾಪ |
| d. ವಿ.ಎಂ. ಇನಾಂದಾರ್ | iv. ಹೆಜ್ಜಾಲ |
| | v. ಮಾರ್ಗ |

ಇವುಗಳಲ್ಲಿ ಸರಿಯಾದ ಉತ್ತರ

| | a | b | c | d |
|---|---|---|---|---|
| (A) | ii | iv | v | iii |
| (B) | i | iv | v | ii |
| (C) | ii | iii | iv | v |
| (D) | i | ii | iii | iv |

**46.** ಬಹು ಆಯ್ಕೆಯ ಜೋಡಣೆ :

| | | | |
|---|---|---|---|
| a. | ರುದ್ರನಾಟಕ | i. | ಮದಲಿಂಗನ ಕಣಿವೆ |
| b. | ಅನುವಾದ | ii. | ಚಿಕವೀರ ರಾಜೇಂದ್ರ |
| c. | ಐತಿಹಾಸಿಕ ಕಾದಂಬರಿ | iii. | ಯಯಾತಿ |
| d. | ಕಥನ ಕಾವ್ಯ | iv. | ಬೆಕ್ಕಿನ ಕಣ್ಣು |
| | | v. | ಅಂತಿಗೊನೆ |

**ಇವುಗಳಲ್ಲಿ ಸರಿಯಾದ ಉತ್ತರ**

| | a | b | c | d |
|---|---|---|---|---|
| (A) | i | ii | iii | v |
| (B) | ii | i | iv | iii |
| (C) | v | iii | ii | i |
| (D) | v | iii | i | ii |

**47.** ಬಹು ಆಯ್ಕೆಯ ಜೋಡಣೆ :

| | | | |
|---|---|---|---|
| a. | ಕರ್ಮಧಾರಯ ಸಮಾಸ | i. | ಅರಗಿಳಿ |
| b. | ಅಂಶಿ ಸಮಾಸ | ii. | ಒಸಗೆ |
| c. | ದ್ವಂದ್ವ ಸಮಾಸ | iii. | ಬಿಸಿನೀರು |
| d. | ತತ್ಪುರುಷ ಸಮಾಸ | iv. | ಅಣ್ಣ ತಮ್ಮಂದಿರು |
| | | v. | ಮುಂಗೈ |

**ಇವುಗಳಲ್ಲಿ ಸರಿಯಾದ ಉತ್ತರ**

| | a | b | c | d |
|---|---|---|---|---|
| (A) | ii | i | iii | v |
| (B) | iii | i | v | iv |
| (C) | iii | v | iv | i |
| (D) | ii | iii | i | v |

**48.** ಅನುಕ್ರಮ ಮಾದರಿ :

ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮವನ್ನು ಗುರುತಿಸಿ.

(A) ಸಮಾಲೋಕನ, ನಗ್ನಸತ್ಯ, ಸಾಹಿತ್ಯ ಮತ್ತು ಸತ್ಯ, ಚಕೋರಿ.

(B) ನಗ್ನಸತ್ಯ, ಸಮಾಲೋಕನ, ಸಾಹಿತ್ಯ ಮತ್ತು ಸತ್ಯ, ಚಕೋರಿ.

(C) ನಗ್ನಸತ್ಯ, ಸಮಾಲೋಕನ, ಚಕೋರಿ, ಸಾಹಿತ್ಯ ಮತ್ತು ಸತ್ಯ.

(D) ಸಮಾಲೋಕನ, ಸಾಹಿತ್ಯ ಮತ್ತು ಸತ್ಯ, ನಗ್ನಸತ್ಯ, ಚಕೋರಿ.

**49.** (A) ಮಧುರಚೆನ್ನ, ಬೀಚಿ, ಚಂದ್ರಕಾಂತ ಕುಸನೂರ, ವಿಜಯಾದಬ್ಬೆ.

(B) ಬೀಚಿ, ಮಧುರಚೆನ್ನ, ವಿಜಯಾದಬ್ಬೆ, ಚಂದ್ರಕಾಂತ ಕುಸನೂರ.

(C) ಚಂದ್ರಕಾಂತ ಕೂಸನೂರ, ಬೀಚಿ, ಮಧುರಚೆನ್ನ, ವಿಜಯಾದಬ್ಬೆ.

(D) ಮಧುರಚೆನ್ನ, ಚಂದ್ರಕಾಂತ ಕುಸನೂರ, ಬೀಚಿ, ವಿಜಯಾದಬ್ಬೆ.

**50.** (A) ಸಮಯ ಪರೀಕ್ಷೆ, ವಿವೇಕಚಿಂತಾಮಣಿ, ಮೋಹನತರಂಗಿಣಿ, ಅದ್ಭುತ ರಾಮಾಯಣ.

(B) ಮೋಹನತರಂಗಿಣಿ, ಸಮಯಪರೀಕ್ಷೆ, ವಿವೇಕಚಿಂತಾಮಣಿ, ಅದ್ಭುತರಾಮಾಯಣ.

(C) ವಿವೇಕಚಿಂತಾಮಣಿ, ಅದ್ಭುತರಾಮಾಯಣ, ಸಮಯಪರೀಕ್ಷೆ, ಮೋಹನತರಂಗಿಣಿ.

(D) ಸಮಯಪರೀಕ್ಷೆ, ಮೋಹನತರಂಗಿಣಿ, ವಿವೇಕಚಿಂತಾಮಣಿ, ಅದ್ಭುತರಾಮಾಯಣ.

**Space For Rough Work**